ಎಂದರೆ 'ಶುರುವಾತು' ಎಂದುಕೊಂಡರೆ ಅರ್ಥದ್ರೋಹ ಎಸಗಿದಂತೇ ಥೇಟು! 'ಆರಂಬ' ಎಂದರೆ 'ಬೇಸಾಯ' ಎನ್ನುವುದು ಅಚ್ಚಗನ್ನಡದ ದೇಶೀ ಪದ.

'ಪ್ರಧಾನ' ಎನ್ನುವುದು ಉನ್ನತಾಧಿಕಾರವನ್ನು ಸೂಚಿಸಿದರೆ, 'ಪ್ರದಾನ' ಎಂದರೆ ವೇದಿಕೆಯ ಮೇಲಿಂದ ಪ್ರಶಸ್ತಿ, ಪುರಸ್ಕಾರ , ಬಿರುದು-ಬಾವಲಿ, ಮತ್ತೊಂದು ಮಗದೊಂದು ಕೊಡಮಾಡುವುದು, ಅದರರ್ಥ 'ನೀಡುವಿಕೆ'. ಅದೇ ತರಹ 'ವಿದುರ' ಎಂದರೆ ಪಂಡಿತ, ವಿದ್ವಾಂಸ ಅನ್ನುವುದು ಎಲ್ಲರಿಗೂ ಗೊತ್ತು. ಅದನ್ನೆ ಬಾಯಿ ತಪ್ಪಿ 'ವಿಧುರ' ಎಂದೇನಾದರು ಅಂದು ಬಿಟ್ಟರಾದರೆ, ಆಗ ಅದು 'ಹೆಂಡತಿ ಸತ್ತವನು', ವಿಧವೆ ಪದದ ವಿರುದ್ಧ ಪದವಾದೀತು. ಇದನ್ನೇ ಬರೆವಣಿಗೆಯಲ್ಲಿ ಮಹಾಪ್ರಾಣ ಅಕ್ಷರಗಳಿಗಿರುವ ತಾಕತ್ತು ಅನ್ನುವದು!

ಉದ್ಯಾನ ಮತ್ತು ವನ ಎರಡೂ ಒಂದೇ. ಅಂದಮೇಲೆ 'ಉದ್ಯಾನವನ' ಎಂದು ಬಳಸುವ ಅಗತ್ಯವಿಲ್ಲ. ಅದೇರೀತಿ, 'ದಂಪತಿ' ಎಂದಮೇಲೆ ಅಲ್ಲಿ ಗಂಡ ಮತ್ತು ಹೆಂಡತಿ ಇಬ್ಬರೂ ಇರುತ್ತಾರೆ. ಅಂಥ ಕಡೆ ಮತ್ತೆ 'ದಂಪತಿಗಳು' ಎಂದು ಬಳಸಬೇಕಾಗಿಲ್ಲ; ಹಾಗೆಯೆ ಆವ್ + ಕಳು = 'ಆಕಳು' ಎನ್ನುವುದನ್ನು ಮತ್ತೆ ಆಕಳುಗಳು ಎಂದು ಬರೆಯುವುದರ ಅಗತ್ಯವಿಲ್ಲ ಎಂಬ ವ್ಯಾಕರಣದ ಸಾಮಾನ್ಯ 'ತಿಳಿವಳಿಕೆ' ನಮಗಿರಬೇಕು.

ಆದರೆ 'ನರಮಾನವ, ಕೂಡಲಸಂಗಮ, ಶಿವಶಂಕರ, ಋಷಿಮುನಿ, ಗಾಳಿಆಂಜನೇಯ, ಹಳ್ಳಿಖೇಡ, ಕ್ಯಾಚ್ ಹಿಡಿ, ಗೇಟ್ ಬಾಗಿಲು, ರೀತಿರಿವಾಜು, ಕೀಲ್ ಜಾಯಿಂಟು, ಸೇಮ್ ಅದೇ' ಇಂಥವೇ ಅನೇಕ ಅಪರೂಪದ ದ್ವಿರುಕ್ತಿಗಳು. ಭಾಷಾಶಾಸ್ತ್ರವೂ ಅವನ್ನು ಒಪ್ಪಿಕೊಂಡಿದೆ.

ಅಂದಹಾಗೆ 'ಹ' ಕಾರವನ್ನು 'ಅ' ಕಾರವನ್ನಾಗಿ ಬಳಸುವವರೂ 'ಅ' ಕಾರವನ್ನು 'ಹ' ಕಾರವನ್ನಾಗಿ ಬಳಸುವವರೂ ಬಹಳ ಮಂದಿ ನಮ್ಮ ನಡುವೆ. ಅದು ಸಮಸ್ಯೆಯೇ ಅಲ್ಲ ಅನ್ನುವಷ್ಟರ ಮಟ್ಟಿಗೆ ಬಾಯಿಬಡಿಯುವವರ ಸಂತತಿಯೂ ದೊಡ್ಡ ಪ್ರಮಾಣದಲ್ಲಿದೆ. ದೂರ ದರ್ಶನ ವಾಹಿನಿಯೊಂದರ ಹಾಸನದ ಪ್ರತಿನಿಧಿ ಎಗ್ಗಿಲ್ಲದೇ 'ಆಸನ' ಎಂದೆ ಉಗ್ಗಡಿಸುತ್ತಿದ್ದ. ಅದನ್ನು ಹಾಸನ ಎಂದು ಪರಿಭಾವಿಸುವ ಸಣ್ಣ ಔದಾರ್ಯ ಕನ್ನಡಿಗರಿಗೆ ಇಲ್ಲದೆ ಹೋದರೆ ಹೇಗೆ!

ಆಕ್ಷೇಪಿಸಿದರೆ 'ನಾವು ಶೂದ್ರರು ಸ್ವಾಮಿ ನೀವೇ ತುಸು ಸುಧಾರಿಸಿಕೊಳ್ಳಲು ಕಲಿಯಿರಿ' ಎಂದು ತಿದ್ದಲು ಹೋದವರ ಮೇಲೇ ತಿರುಗಿ ಬೀಳುತ್ತಾರೆ. 'ಹೌದಪ್ಪಾ, 'ಆಸನದಲ್ಲಿ ಮಳೆ ಆಗ್ಯದೆ' ಎಂದರೇನರ್ಥ?' ಆಗ ಅದು ಮೊಳೆ ರೋಗ - 'ಮೂಲವ್ಯಾಧಿ' ಎಂದಾಗಿ ಬಿಡುತ್ತದಲ್ಲ ದೊರೆಯೇ, ಅದಕ್ಕೆ ಏನು ಹೇಳುತ್ತೀ. ಹೋಗಲಿ ಅದು ಆಡುನುಡಿಯಲ್ಲಿ ಆಗುವ ಎಡವಟ್ಟುಗಳನ್ನು ಸಹಿಸಬಹುದು. ಆದರೆ ಶುದ್ಧ ಬರೆವಣಿಗೆಯಲ್ಲಿ ತುಸು ನಿಗಾ ವಹಿಸಬೇಡವೆ?

ಆ ಪೈಕಿಯವನೊಬ್ಬ ಬಾಯಿ ತಪ್ಪಿ ಅಲ್ಲ, ಘಂಟಾಘೋಷವಾಗೇ - 'ಹಾದರಪೂರ್ವಕವಾಗಿ ಸ್ವಾಗತಿಸುತ್ತೇನೆ' ಎಂದು ಬಿಡುತ್ತಾನೆ, ತುಂಬಿದ ಸಭೆಯ ಎತ್ತರದ ವೇದಿಕೆಯಲ್ಲಿ ನಿಂತು. ಶಭಾಷ್ ಮಗನೇ ಹೊಡೀ ನಗಾರಿ! 'ಹ'ಕಾರ 'ಅ'ಕಾರವಾಗುವುದು ಆಡು ಭಾಷೆಯ ಲಕ್ಷಣವೆಂದೂ ಅಪಭ್ರಂಶ ಆದರೇನು? ಅದನ್ನು ತದ್ಭವವೆಂದು ಭಾವಿಸಿ ಹೊಟ್ಟೆಗೆ ಹಾಕಿಕೊಳ್ಳಬೇಕೆಂಬುದು ಅಂಥವರ ಮೊಂಡು ವಾದ. ಅಭಿನಂದನೆ ಹೇಳುವಾಗಲೂ 'ಹಾರ್ಧಿಕ' ಎಂದರೆ ಹೇಗೆ? ಹೃದಯಕ್ಕೆ ಸಂಬಂಧಿಸಿದ ಪದ ಅಲ್ಲಿ ಮಹಾಪ್ರಾಣ ಬೇಕಾಗಿಲ್ಲ ಅನ್ನುವುದು ಬಹಳ ಮಂದಿಗೆ ಗೊತ್ತಿಲ್ಲ. 'ಹೃದಯವೆಂದರೆ ಸುಮ್ಮನೇ ಏನು?' ಎನ್ನುವ 'ಧೀ'ಮಂತರು! ಹಾಗೆಯೆ ತಿರಗಾ ಮುರಗಾ 'ಅ' ಕಾರವನ್ನು 'ಹ' ಕಾರವನ್ನಾಗಿ ಬಳಸುವವರೂ ಸಾಕಷ್ಟಿದ್ದಾರೆ. 'ಅರಳು ಹುರಿದಂತೆ' ಎಂಬ ನುಡಿಗಟ್ಟನ್ನು 'ಹರಳು ಉರಿದಂತೆ' ಎಂದು ಬರೆಯುವ ಹೊಸ ತಲೆಮಾರಿನ ಬರಹಗಾರರಿದ್ದಾರೆ. ಏನ್ಮಾಡೋಣ.

ಅಂದ ಹಾಗೆ, ಆಡು ಭಾಷೆಯಲ್ಲಿ 'ನ' ಕಾರವನ್ನು 'ಣ' ಕಾರವಾಗಿಯೂ 'ಣ' ಕಾರವನ್ನು 'ನ' ಕಾರವಾಗಿಯೂ ಬಳಸುವವರ ದೊಡ್ಡ ಪಡೆಯೇ ಇದೆ. ಆ ಪ್ರಮಾದವನ್ನು ಬರೆವಣಿಗೆಯಲ್ಲಿ ಎಸಗಬಾರದೆಂಬುದು ನನ್ನಂಥವನ ಕಾಳಜಿ. ಮರಾಠಿ ಮೂಲದ ಅಂಗಡಿಕಾರನೊಬ್ಬ ರಸಗವಳ ತುಂಬಿದ್ದ ಗುಟ್ಕಾ ಬಾಯಿಯನ್ನು ತುಳುಕದಂತೆ ತುಸು ಮೇಲಕ್ಕೆತ್ತಿ 'ಕೋಣ?' ಅನ್ನುವುದು ತಮಾಷೆಯಾಗಿ ತೋರುತ್ತಿತ್ತು,